# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ: 18.07.2011**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕೋರಮಂಗಲ ಉಪ ವಿಭಾಗದ ವ್ಯಾಪ್ತಿಯ ವಾರ್ಡ್ ನಂ.147ರ ಆಡುಗೋಡಿ ಪೊಲೀಸ್ ವಸತಿ ಗೃಹಗಳ ಸಂಕೀರ್ಣದ ನಡುವೆ ಇರುವ ಕದಂಬ ಉದ್ಯಾನವನದಲ್ಲಿ ಗಿಡನೆಡುವ ಕಾರ್ಯಕ್ರಮವನ್ನು ದಿನಾಂಕ: 17.07.2011 ರಂದು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮಕ್ಕೆ ಪಾಲಿಕೆಯ ಆಯುಕ್ತರಾದ ಶ್ರೀ ಸಿದ್ದಯ್ಯ ರವರು ಗಿಡ ನೆಡುವ ಮೂಲಕ ಚಾಲನೆ ನೀಡಿದರು.

ಈ ಕಾರ್ಯಕ್ರಮದಲ್ಲಿ ದಕ್ಷಿಣ ವಲಯದ ಜಂಟಿ ಆಯುಕ್ತರು, ಮುಖ್ಯ ಅಭಿಯಂತರರು, ಸ್ಥಳೀಯ ಪಾಲಿಕೆ ಸದಸ್ಯರು, ಸಿ.ಎ.ಆರ್.ನ ಉಪ ಪೊಲೀಸ್ ಆಯುಕ್ತರು, ಸಹಾಯಕ ಆಯುಕ್ತರು, ಇತರೆ ಪೊಲೀಸ್ ಅಧಿಕಾರಿಗಳು, ಬಿ.ಬಿ.ಎಂ.ಪಿ.ಯ ತೋಟಗಾರಿಕೆ ಅಧೀಕ್ಷಕರು, ಸ್ಥಳೀಯ ಪಾಲಿಕೆ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು ಭಾಗವಹಿಸಿ, ಕಾರ್ಯಕ್ರಮವನ್ನು ಯಶಸ್ವಿಗೊಳಿಸಿರುತ್ತಾರೆ ಎಂದು ಸಹಾಯಕ ಕಾರ್ಯಪಾಲಕ ಅಭಿಯಂತರರು (ಕೋರಮಂಗಲ) ಉಪ ವಿಭಾಗ ರವರು ತಿಳಿಸಿರುತ್ತಾರೆ.

**ಸಾರ್ವಜನಿಕ ಸಂಪರ್ಕಾಧಿಕಾರಿ**

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ: 18.07.2011**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ 40 ಮೈಕ್ರಾನ್‌ಗಿಂತ ಕಡಿಮೆ ಇರುವ ಪ್ಲಾಸ್ಟಿಕ್ ಬಳಕೆ ನಿಷೇಧಿಸಲಾಗಿದೆ. ಈ ಬಗ್ಗೆ ಸಾರ್ವಜನಿಕರು ಹಾಗೂ ವ್ಯಾಪಾರಸ್ಥರಿಗೂ ಕೂಡಾ ತಿಳುವಳಿಕೆ ನೀಡಲಾಗಿದೆ. ದಿನಾಂಕ: 17.07.2011 ರಂದು ಪಾಲಿಕೆ ಆಯುಕ್ತರು ವಲಯ ಆರೋಗ್ಯಾಧಿಕಾರಿಗಳಿಗೆ ಸೂಚನೆ ನೀಡಿ, 40 ಮೈಕ್ರಾನ್‌ಗಿಂತ ಕಡಿಮೆ ಇರುವ ಪ್ಲಾಸ್ಟಿಕ್ ಬಳಸುತ್ತಿರುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲು ಸೂಚಿಸಿರುತ್ತಾರೆ.

ಈ ಹಿನ್ನೆಲೆಯಲ್ಲಿ ದಿನಾಂಕ: 17.07.2011 ರಂದು ಉಪ ಆರೋಗ್ಯಾಧಿಕಾರಿ ಗಾಂಧಿನಗರ ವಲಯದ ತರಗುಪೇಟ್ ಪ್ರದೇಶದಲ್ಲಿ ಪಶ್ಚಿಮ ವಲಯದ ಆರೋಗ್ಯ ವಿಭಾಗದ ಅಧಿಕಾರಿಗಳಿಂದ ಕಾರ್ಯಾಚರಣೆ ನಡೆಸಿ, 40 ಮೈಕ್ರಾನ್‌ಗಿಂತ ಕಡಿಮೆ ಇರುವ ಪ್ಲಾಸ್ಟಿಕನ್ನು ಅನಧಿಕೃತವಾಗಿ ಮಾರಾಟ ಮಾಡುತ್ತಿದ್ದ ಪ್ಲಾಸ್ಟೋ ಬ್ಯಾಗ್ಸ್, ನಂ.158, ಹಳೆ ತರಗುಪೇಟ್, ಬೆಂಗಳೂರು ರವರಿಗೆ ರೂ.10,000/- ಮತ್ತು ಭಾಸ್ಕರ್ ನಂ.03, ಎಂ.ಎಲ್.ಸಿ. ಕಾಂಪ್ಲೆಕ್ಸ್, ಹಳೆ ತರಗುಪೇಟ್, ಬೆಂಗಳೂರು ರವರಿಗೆ ರೂ.10,000/- ಹಾಗೂ ನೂರುಲ್ಲಾ ನಂ.08, ಕರ್ನಾಟಕ ಪ್ಲಾಸ್ಟಿಕ್ಸ್, ಹಳೆ ತರಗುಪೇಟ್, ಬೆಂಗಳೂರು ರವರಿಗೆ ರೂ.2,000/- ರೂ.ಗಳು ಒಟ್ಟು ರೂ.22,000/- (ಇಪ್ಪತ್ತೆರಡು ಸಾವಿರ) ರೂ.ಗಳನ್ನು ದಂಡದ ರೂಪದಲ್ಲಿ ವಸೂಲಿ ಮಾಡಲಾಗಿದೆ. ಈ ಕಾರ್ಯಾಚರಣೆಯಲ್ಲಿ ಒಟ್ಟು 500 ಕೆ.ಜಿ. ಪ್ಲಾಸ್ಟಿಕನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ ಎಂದು ಉಪ ಆರೋಗ್ಯಾಧಿಕಾರಿ (ಮಲ್ಲೇಶ್ವರಂ) ವಲಯ ರವರು ತಿಳಿಸಿದ್ದಾರೆ.

ಪೂರ್ವ ವಲಯದಲ್ಲಿ ವಾರ್ಡ್ ನಂ.23ರಲ್ಲಿ Ezekeil ಇಂಡಸ್ಟ್ರಿಯಲ್ ಎಸ್ಟೇಟ್ ಪ್ಲಾಸ್ಟಿಕ್ ಬಳಕೆ ತಯಾರಿಸುವ ಘಟಕವನ್ನು ಮುಚ್ಚಲಾಯಿತು. ಒಟ್ಟು 714 ಅಂಗಡಿ ಮುಗ್ಗಟ್ಟುಗಳನ್ನು ತಪಾಸಣೆ ಮಾಡಿ, ರೂ.7,000/- ರೂ.ಗಳಷ್ಟು ದಂಡ ಹಾಕಲಾಗಿದೆ ಎಂದು ಆರೋಗ್ಯಾಧಿಕಾರಿ (ಪೂರ್ವ) ವಲಯ ರವರು ತಿಳಿಸಿದ್ದಾರೆ.

**ಸಾರ್ವಜನಿಕ ಸಂಪರ್ಕಾಧಿಕಾರಿ**